# ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)

## ಕರ್ನಾಟಕ

**ಮಾನ್ಯ ಸಂಪಾದಕರೆ ಮತ್ತು ಮಾಧ್ಯಮ ಪ್ರತಿನಿಧಿಗಳೆ,**

ಕ್ರಾಂತಿಕಾರಿ ಶುಭಾಶಯಗಳು.

ದಿನಾಂಕ 15-05-2008ರಂದು ನಾಡ್ಪಾಲು ಗ್ರಾಮದ ಸೀತಾನದಿಯ ಭೋಜಶೆಟ್ಟಿಯ ಮೇಲಿನ ನಮ್ಮ ಕ್ರಮದ ಕುರಿತು ನಮ್ಮ ಪ್ರಕಟಣೆ ಬಿಡುಗಡೆ ಮಾಡುತ್ತಿದ್ದೇವೆ. ಇದನ್ನು ಪರಿಗಣಿಸಿ ಪ್ರಕಟಿಸಬೇಕೆಂದು ಈ ಮೂಲಕ ಮನವಿ ಮಾಡುತ್ತಿದ್ದೇವೆ.

**ಹೋರಾಟದಲ್ಲಿ ತಮ್ಮೊಂದಿಗೆ,**

**ಗಂಗಾಧರ**
**ರಾಜ್ಯ ಸಮಿತಿ ಪರವಾಗಿ**
**18-05-2008** **ಸಿಪಿಐ (ಮಾವೋವಾದಿ)**
**ಕರ್ನಾಟಕ**

---

ಜನವಿರೋಧಿ ನೀಚಕೃತ್ಯಗಳನ್ನು ನಡೆಸುತ್ತಾ ಜನರ ಪೀಡಕನಾಗಿದ್ದ, ಜನರ ಆಗ್ರಹಗಳನ್ನು ಧಿಕ್ಕರಿಸಿದ, ಕ್ರಾಂತಿಕಾರಿ ಚಳುವಳಿಗೆ ಅಡ್ಡಿಗಳನ್ನುಂಟು ಮಾಡಲು ಪ್ರಯತ್ನಿಸಿದ, ಜನರ ಹಾಗೂ ಪಕ್ಷದ ಎಚ್ಚರಿಕೆಗಳನ್ನು ಕಡೆಗಣಿಸಿ ತನ್ನ ನೀಚ ಕೆಲಸಗಳನ್ನು ಮತ್ತಷ್ಟು ಮುಂದುವರಿಸಿದ ನಾಡ್ಪಾಲಿನ ಸೀತಾನದಿಯ ಭೋಜಶೆಟ್ಟಿ ಮೇಲೆ ಪಕ್ಷ ತೆಗೆದುಕೊಂಡ ತೀರ್ಮಾನವನ್ನು ನಮ್ಮ ಪ್ರಜಾ ವಿಮೋಚನಾ ಗೆರಿಲ್ಲಾ ಸೇನೆಯ (ಪಿಎಲ್‌ಜಿಎ) ತಂಡವೊಂದು 15/05/08ರಂದು ಜಾರಿ ಮಾಡಿದೆ.

## ಭೋಜಶೆಟ್ಟಿಯ ಮೇಲಿನ ಕ್ರಮಕ್ಕೆ ಇರುವ ಕಾರಣಗಳು

* ಆ ಭಾಗದಲ್ಲಿ ನಡೆಯುತ್ತಿರುವ ಕಳ್ಳನಾಟ ಮಾಫಿಯಾದ ಒಬ್ಬ ಪ್ರಮುಖ ವ್ಯಕ್ತಿಯಾಗಿದ್ದು ಬಡಜನರನ್ನು ಆಮಿಷ ಮತ್ತು ಬೆದರಿಕೆಯೊಡ್ಡಿ ಕಳ್ಳನಾಟ ದಂಧೆಯಲ್ಲಿ ತೊಡಗಿಸುತ್ತಿದ್ದ. ಗಂಧ ಸಾಗಾಟ ವ್ಯವಹಾರ ನಡೆಸುತ್ತಿದ್ದ. ಭೂಮಾಲೀಕನಾಗಿ ಸುತ್ತಮುತ್ತಲಿನ ಗ್ರಾಮಗಳ ಜನರನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಹಿಂಸಿಸುತ್ತಿದ್ದ. ಬಡ್ಡಿ ವ್ಯವಹಾರದಲ್ಲಿ ಜನರನ್ನು ಸುಲಿಯುತ್ತಿದ್ದ.
* ಜನರ ನಡುವೆ ಜಗಳ ಹಚ್ಚುವುದು, ಪೊಲೀಸ್, ಕೋರ್ಟ್ ಕಟ್ಟೆ ಹತ್ತುವಂತೆ ಮಾಡುವುದು, ನಂತರ ತಾನೇ ಮಧ್ಯಸ್ತಿಕೆ ನಡೆಸಿ ಪರಿಹಾರ ಮಾಡುವ ನಾಟಕವಾಡಿ ಎರಡೂ ಕಡೆಯವರಿಂದಲೂ ಸುಲಿಯುತ್ತಿದ್ದ.
* ಶಾಲಾ ಶಿಕ್ಷಕನಾಗಿ ನೂರಾರು ಮಕ್ಕಳಿಗೆ ಕಲಿಸುವ ಮಹತ್ವದ ಜವಾಬ್ದಾರಿಯಲ್ಲಿದ್ದರೂ ಶಿಕ್ಷಕನ ನೀತಿ ಮೌಲ್ಯಗಳನ್ನೆಲ್ಲಾ ಗಾಳಿಗೆ ತೂರಿ ತನ್ನ ಸಹೋದ್ಯೋಗಿಗಳೊಂದಿಗೂ ಗೂಂಡಾನಂತೆ ವರ್ತಿಸುತ್ತಿದ್ದ. ಆ ರೀತಿ ಇವನಿಂದ ದೌರ್ಜನ್ಯ ಕಿರುಕುಳಕ್ಕೊಳಗಾದವರು ಹಲವು ಜನರಿದ್ದಾರೆ.
* ನಗುವಿನ, ಸೌಜನ್ಯದ ಮುಖವಾಡ ತೋರಿಸುತ್ತಾ ಎಲ್ಲಾ ಜನವಿರೋಧಿ ಕೆಲಸಗಳನ್ನು ನಿರ್ವಹಿಸುತ್ತಿದ್ದ. ಪ್ರತಿಗಾಮಿ, ಹಿಂದೂ ಫ್ಯಾಸಿಸ್ಟ್ ಹಾಗೂ ನಾಟ ಮಾಫಿಯಾ, ಗಂಧ ಮಾಫಿಯಾ ಸಂಘಟನೆಯಾದ ಭಜರಂಗದಳದೊಂದಿಗೆ ಸಕ್ರಿಯನಾಗಿದ್ದು ಬಿ.ಜೆ.ಪಿ.ಯೊಂದಿಗೂ ಓಡಾಡುತ್ತಾ ತನ್ನ ಜನವಿರೋಧಿ ಕೆಲಸಗಳಿಗೆ ಬೆಂಬಲವಾಗಿ ಮಾಡಿಕೊಂಡಿದ್ದ.
* ತನ್ನ ಅನುಕೂಲಕ್ಕೆ ತಕ್ಕಂತೆ ಇರದವರ ಮೇಲೆ ಸುಳ್ಳು ಕೇಸು ದಾಖಲಿಸುವುದು, ಮೂಗರ್ಜಿ ಬರೆಯುವುದು, ಇಲಾಖಾ ಮಟ್ಟದಲ್ಲಿ ಕೈಯಾಡಿಸಿ ಕಿರುಕುಳ ನೀಡುವುದು ಇತ್ಯಾದಿ ಮಾಡುತ್ತಿದ್ದ.
* ನಮ್ಮ ಪಕ್ಷದ ವಿರುದ್ಧ ಪೊಲೀಸ್ ಮಾಹಿತಿದಾರನಾಗಿ ಕೆಲಸ ಮಾಡುತ್ತಿದ್ದ.
* ಜನರ ಭೂಮಿಗಳ ಹಕ್ಕುಪತ್ರಗಳನ್ನು ಲಪಟಾಯಿಸುವುದು, ಅವರ ಹೆಸರಿನಲ್ಲಿ ಬ್ಯಾಂಕಿನಲ್ಲಿ ಸಾಲ ಎತ್ತಿ ಬಳಸುವುದು, ನಂತರ ಬಡ್ಡಿಯೊಂದಿಗೆ ಸಾಲ ಭಾರವನ್ನು ಕುತಂತ್ರದಿಂದ ಬಡ ಜನರ ತಲೆಗೆ ಕಟ್ಟುವುದು, ಬಡ ಜನರ ಭೂಮಿಯನ್ನು ಲಪಟಾಯಿಸುವುದು, ತನಗಾಗದವರ ಮೇಲೆ ಹಲ್ಲೆ ಮಾಡಿಸುವುದು ಹೀಗೆ ಇನ್ನು ಹಲವು ನೀಚ ಕೃತ್ಯಗಳನ್ನು ಭೋಜಶೆಟ್ಟಿ ನಡೆಸುತ್ತಿದ್ದ.
* ಸುಮಾರು ಎರಡು ವರ್ಷಗಳ ಹಿಂದೆ ಭೋಜಶೆಟ್ಟಿಯ ಬಳಿ ಮಾತನಾಡಿ ಕಳ್ಳನಾಟ ವ್ಯವಹಾರ ಇನ್ನಿತರ ಜನವಿರೋಧಿ ಕೆಲಸಗಳ ಕುರಿತು ಮಾತನಾಡಿ ಅವುಗಳನ್ನು ನಿಲ್ಲಿಸುವಂತೆ ಮನವೊಲಿಸಲು ನಮ್ಮ ಪಿ.ಎಲ್.ಜಿ.ಎ ದಳ ಹೋಗಿತ್ತು. ಆಗ ಮಾತಾಡಲು ತೋಟಕ್ಕೆ ಬರುತ್ತೇನೆಂದು ಹೇಳಿ ಏಕಾಏಕಿ ತನ್ನಲ್ಲಿದ್ದ ತಲವಾರು ಎತ್ತಿಕೊಂಡು ದಾಳಿ ನಡೆಸಿ ದಳಸದಸ್ಯರನ್ನು ಕೊಲ್ಲಲು ಪ್ರಯತ್ನಿಸಿದ್ದ.

ಭೋಜಶೆಟ್ಟಿಯ ಮೇಲೆ ಕ್ರಮ ತೆಗೆದುಕೊಳ್ಳುವುದು ಆಗ ನಮ್ಮ ತೀರ್ಮಾನವಾಗಿರಲಿಲ್ಲ. ಆತನೊಂದಿಗೆ ಮಾತನಾಡಿ ಅರ್ಥಪಡಿಸಿ ಮನವೊಲಿಸುವುದು ನಮ್ಮ ಉದ್ದೇಶವಾಗಿತ್ತು. ಆದರೆ ಆತ ನಮ್ಮ ದಳದ ಮೇಲೆ ದಾಳಿ ನಡೆಸಲು ಮುಂದಾಗಿದ್ದರಿಂದ ನಾವು ಆಗ ಪ್ರತಿದಾಳಿ ನಡೆಸಿದೆವು. ಅದರಲ್ಲಿ ಆತ ತಪ್ಪಿಸಿಕೊಂಡಿದ್ದ. ನಾವು ಆತನಿಗೆ ಎಚ್ಚರಿಕೆ ನೀಡಿದ್ದೆವು. ಇದಾದ ನಂತರವೂ ಆತ ತನ್ನ ದುಷ್ಕೃತ್ಯಗಳನ್ನು ಮುಂದುವರಿಸಿದ್ದ. ಬಿಜೆಪಿ ಪಕ್ಷ ಪೂರ್ಣ ಆತನ ಬೆಂಗಾವಲಿಗೆ ನಿಂತು ಇಂತಹ ಸಮಾಜ ದ್ರೋಹಿಗೆ, ಜನರ ಹಣದಿಂದ ಪೊಲೀಸ್ ರಕ್ಷಣೆಯನ್ನು ನೀಡಿ ಬಂದೂಕು ಕೂಡ ಒದಗಿಸಿತ್ತು. ಬಿಜೆಪಿಯ ಯಡಿಯೂರಪ್ಪ, ಸುನೀಲ್ ಕುಮಾರ್, ಭಜರಂಗದಳದ ಮಹೇಂದ್ರ ಕುಮಾರ್‌ಗಳು ಈತನ ನೇರ ಬೆಂಬಲಕ್ಕೆ ನಿಂತು ಆತನ ಎಲ್ಲಾ ಸಮಾಜದ್ರೋಹಿ ಕೆಲಸಗಳನ್ನು ಮತ್ತಷ್ಟು ಪ್ರೋತ್ಸಾಹಿಸಿದ್ದರು.

ಇನ್ನು ಭೋಜಶೆಟ್ಟಿಗೆ ಮಾತನಾಡಿ ಮನವರಿಕೆ ಮಾಡುವ ಹಂತ ಮುಗಿದಿದ್ದರಿಂದಾಗಿ ಅಲ್ಲದೆ ಆತ ತನ್ನ ಸಮಾಜ ವಿರೋಧಿ ಕೆಲಸಗಳನ್ನು ನಿಲ್ಲಿಸುವ, ತನ್ನ ಜನವಿರೋಧಿ ಕೆಲಸಗಳನ್ನು ಬಿಟ್ಟು ಜನರ ಜೊತೆ ಜನರ ಪರವಾಗಿ ಬದುಕಲು ಸಿದ್ಧನಾಗದೇ ಪ್ರಭುತ್ವದ ಹಾಗೂ ಬಿಜೆಪಿಯಂತಹ ಪಕ್ಷದ ಬೆಂಬಲದೊಂದಿಗೆ ಜನರ ಮೇಲೆ ಮತ್ತಷ್ಟು ಕಿರುಕುಳ, ಶೋಷಣೆ, ಲೂಟಿ, ನಾಟ ಲೂಟಿ, ಗಂಧ ಲೂಟಿಗಳನ್ನು ಮತ್ತಷ್ಟು ಹೆಚ್ಚಿಸಿದ್ದರಿಂದಾಗಿ ಪಕ್ಷ ಅನಿವಾರ್ಯವಾಗಿ ಜನರ ತೀರ್ಮಾನದಂತೆ ಈ ಅಂತಿಮ ಕ್ರಮವನ್ನು ತೆಗೆದುಕೊಳ್ಳಬೇಕಾಯಿತು. ಅದರಂತೆ ಭೋಜಶೆಟ್ಟಿ ಹಾಗೂ ಆತನ ಸಹಚರ ಸುರೇಶ್ ಶೆಟ್ಟಿಯನ್ನು ನಮ್ಮ ಪಕ್ಷದ ಪಿಎಲ್‌ಜಿಎ ತಂಡ ನಿರ್ಮೂಲಿಸಿದೆ.

ನಮ್ಮ ಪ್ರಜಾ ವಿಮೋಚನಾ ಗೆರಿಲ್ಲಾ ಸೇನೆಯು ನಡೆಸಿದ ಈ ದಾಳಿಯನ್ನು ನಾಡಿನ ಪ್ರಜಾತಂತ್ರವಾದಿಗಳು ಜನಪರರು, ಜನರ ಹಿತ ಬಯಸುವ ವ್ಯಕ್ತಿ ಹಾಗೂ ಸಂಘಟನೆಗಳು ಎತ್ತಿಹಿಡಿಯಬೇಕೆಂದು ಕೋರುತ್ತಿದ್ದೇವೆ. ದುಷ್ಟ ಭೂಮಾಲೀಕರು, ಕಳ್ಳ ಬಡ್ಡಿಕೋರರು, ಲೂಟಿಕೋರ ಶೋಷಕರು, ಭಜರಂಗದಳ - ಬಿಜೆಪಿಯಂತಹ ರಾಜಕೀಯ ಪಕ್ಷಗಳು ಹಾಗೂ ಪ್ರಭುತ್ವದ ಜನವಿರೋಧಿತನಗಳನ್ನು ಬಯಲುಗೊಳಿಸಿ ಖಂಡಿಸಿ ರಾಜಿರಹಿತ ಹೋರಾಟ ನಡೆಸಬೇಕೆಂದು ಈ ಮೂಲಕ ಮನವಿ ಮಾಡುತ್ತಿದ್ದೇವೆ.

ಬಿಜೆಪಿ ಹಾಗೂ ಭಜರಂಗದಳದ ನಾಯಕರುಗಳು ತಮ್ಮ ಕಳ್ಳ ನಾಟ, ಕಳ್ಳ ಗಂಧ ವ್ಯವಹಾರಗಳು, ಜನವಿರೋಧಿತನ ಹಾಗೂ ಲೂಟಿ ಶೋಷಣೆಗಳು, ಕೃತಕ ಸಂಘಟನೆಗಳ ಹೆಸರಿನಲ್ಲಿ ಜನರ ವಿರುದ್ಧ ಕೆಲಸ ಮಾಡುವುದು, ನಮ್ಮ ಪಕ್ಷದ ಹೆಸರಿನಲ್ಲಿ ಸುಳ್ಳು ಪ್ರಚಾರ ನಡೆಸುವುದು, ನಮ್ಮ ಪಕ್ಷದ ವಿರುದ್ಧ ಮಾಹಿತಿದಾರ ಜಾಲ ನಿರ್ಮಿಸಲು ಪ್ರಯತ್ನಿಸುವುದು ಇತ್ಯಾದಿಗಳನ್ನು ನಿಲ್ಲಿಸದಿದ್ದಲ್ಲಿ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆಂದು ಈ ಮೂಲಕ ಎಚ್ಚರಿಸುತ್ತಿದ್ದೇವೆ.

ಹಸಿವು, ಶೋಷಣೆ, ದೌರ್ಜನ್ಯದ ವಿರುದ್ಧದ ಧ್ವನಿಗಳನ್ನು ಹಾಗೂ ಹೋರಾಟಗಳನ್ನು ಎಂದಿಗೂ ದಮನಿಸಿ ಹತ್ತಿಕ್ಕಲು ಯಾವ ಶಕ್ತಿಗಳಿಂದಲೂ ಸಾಧ್ಯವಿಲ್ಲ ಎಂಬ ಶಾಶ್ವತ ಸತ್ಯವನ್ನು ಅರ್ಥಮಾಡಿಕೊಳ್ಳಬೇಕು. ಹತ್ತಿಕ್ಕಿದಂತೆ ಅನ್ನಿಸಿದರೂ ಅದು ಅಲ್ಪಕಾಲ ಮಾತ್ರ.

ಸಮಾಜ ವಿರೋಧಿ, ಜನಪೀಡಕನಾದ ಭೋಜಶೆಟ್ಟಿಯಂತಹವರ ಮೇಲೆ ಅವನಿಂದ ತೀವ್ರ ಹಿಂಸೆಗೊಳಗಾಗಿದ್ದ ಜನರು ತಿರುಗಿಬಿದ್ದು ಶಿಕ್ಷೆ ಜಾರಿಗೊಳಿಸಿದ ಕೂಡಲೆ ಹಿಂಸೆ ಎಂದು, ಇದನ್ನು ಹತ್ತಿಕ್ಕಬೇಕೆಂದು ಬೊಬ್ಬೆ ಹೊಡೆಯುವ, ಸಂಪಾದಕೀಯಗಳನ್ನು ಬರೆದು ಜನರ ಹಸಿವಿನ ಹಾಗೂ ಶೋಷಣೆಯ ವಿರುದ್ಧದ ಹೋರಾಟವನ್ನು ದಮನಿಸಿ ಹತ್ತಿಕ್ಕಬೇಕೆಂದು ಒತ್ತಾಯಿಸುವ ಅದೇ ವೇಳೆ ಪ್ರಭುತ್ವ, ದುಷ್ಟ ಭೂಮಾಲೀಕರು, ಕಳ್ಳ ಮಾಫಿಯಾಗಳು, ಕುತಂತ್ರ ರಾಜಕಾರಣಿಗಳ ಹಿಂಸೆ, ಲೂಟಿ ಶೋಷಣೆಗಳ, ಕಗ್ಗೊಲೆ, ದೌರ್ಜನ್ಯಗಳ ಬಗ್ಗೆ ಸುಮ್ಮನಿರುವ, ಅದೇರೀತಿಯ ಮೊನಚು ಪ್ರದರ್ಶಿಸದ, ಪರೋಕ್ಷವಾಗಿ ಇಲ್ಲವೆ ಪ್ರತ್ಯಕ್ಷವಾಗಿ ಸಮರ್ಥಿಸುವ ವ್ಯಕ್ತಿಗಳು, ಸಂಘಟನೆಗಳು, ಮಾಧ್ಯಮಗಳ ಬಗ್ಗೆ; ಜನರು, ಜನಪರ ವ್ಯಕ್ತಿ, ಸಂಘಟನೆಗಳು, ಪ್ರಜಾತಂತ್ರವಾದಿಗಳು ಎಚ್ಚರವಹಿಸಿ ಬಯಲುಗೊಳಿಸಿ ಹೋರಾಡಬೇಕೆಂದು ನಾವು ಕೇಳಿಕೊಳ್ಳುತ್ತಿದ್ದೇವೆ.

ಕ್ರಾಂತಿಕಾರಿ ವಂದನೆಗಳೊಂದಿಗೆ,

**ಗಂಗಾಧರ**
**ರಾಜ್ಯ ಸಮಿತಿ ಪರವಾಗಿ**
**ಸಿಪಿಐ (ಮಾವೋವಾದಿ)**
**ಕರ್ನಾಟಕ**

**18 ಮೇ, 2008**